**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂಖ್ಯೆ: ಕೃಆ/ಆವಿ/ಕಡತ ಚಲನೆ/2014-15

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ: 28-10-2014.

# ಸುತ್ತೋಲೆ

ವಿಷಯ: ಇಲಾಖಾ ಮುಖ್ಯಸ್ಥರ ಆಡಳಿತ ಮತ್ತು ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸುವ ಬಗ್ಗೆ.
ಉಲ್ಲೇಖ: ಇದೇ ಸಮಸಂಖ್ಯೆಯ ಸುತ್ತೋಲೆ ದಿನಾಂಕ:10-7-2014.

-------

ದಿನಾಂಕ: 08.07.2014ರ ಸರ್ಕಾರದ ಆದೇಶದಲ್ಲಿ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳನ್ನು ಒಂದುಗೂಡಿಸಿ ಮರುಹೊಂದಾಣಿಕೆ ಮಾಡಿರುವ ಹಿನ್ನಲೆಯಲ್ಲಿ ಕೃಷಿ ಆಯುಕ್ತರ ಕಛೇರಿಯಲ್ಲಿನ ದೈನಂದಿನ ಕೆಲಸ ಕಾರ್ಯಗಳು ತ್ವರಿತವಾಗಿ ನಿರ್ದಿಷ್ಟ ಅವಧಿಯಲ್ಲಿ ಅನುಷ್ಠಾನಗೊಳಿಸಲು, ಕಡತಗಳ ಶೀಘ್ರ ವಿಲೇವಾರಿ ಹಾಗೂ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ಉದ್ದೇಶದಿಂದ ಇಲಾಖಾ ಮುಖ್ಯಸ್ಥರಿಗೆ ಇರುವ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ಈ ಕೆಳಕಂಡಂತೆ ಕೃಷಿ ನಿರ್ದೇಶಕರು ಹಾಗೂ ಅಪರ/ಜಂಟಿ ನಿರ್ದೇಶಕರು (ಆಡಳಿತ) ಇವರಿಗೆ ಪ್ರತ್ಯಾಯೋಜಿಸಲಾಗಿದೆ.

ಉಲ್ಲೇಖಿತ ಸುತ್ತೋಲೆಯನ್ನು ಮುಂದುವರೆಸುತ್ತಾ ಸರ್ಕಾರಕ್ಕೆ ಸಲ್ಲಿಸುವ ಆಡಳಿತ ಮತ್ತು ವಿಚಾರಣೆಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಕೃಷಿ ಆಯುಕ್ತರ ಅನುಮೋದನೆಗಾಗಿ ಮಂಡಿಸುವುದು.

| | | |
|---|---|---|
| .ರಜೆ ಮಂಜೂರಾತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಎಲ್ಲಾ 'ಎ' ಗುಂಪಿನ ಅಧಿಕಾರಿಗಳು<br>ಎಲ್ಲಾ " ಬಿ " ಗುಂಪಿನ ಅಧಿಕಾರಿಗಳು<br>ಎಲ್ಲಾ 'ಸಿ' ಮತ್ತು 'ಡಿ' ಗುಂಪಿನ ಅಧಿಕಾರಿಗಳು |
| ವೈದ್ಯಕೀಯ ವೆಚ್ಚ ಮರುಪಾವತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಎ ಗುಂಪು<br>ಬಿ ಗುಂಪು<br>ಸಿ ಮತ್ತು ಡಿ ಗುಂಪು |
| ಪ್ರಭಾರ ಭತ್ಯೆ ಮಂಜೂರಾತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಎ ಗುಂಪು<br>ಬಿ ಗುಂಪು<br>ಸಿ ಮತ್ತು ಡಿ ಗುಂಪು |
| ನೇಮಕಾತಿ | ಕೃಷಿ ಆಯುಕ್ತರು | ಬಿ, ಸಿ ಮತ್ತು ಡಿ ಗುಂಪು |
| ವರ್ಗಾವಣೆ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು | ಬಿ ಗುಂಪು<br>ಸಿ ಮತ್ತು ಡಿ ಗುಂಪು |
| ಅನುಕಂಪ ನೇಮಕಾತಿ | ಕೃಷಿ ಆಯುಕ್ತರಿಗೆ<br>ಕೃಷಿ ನಿರ್ದೇಶಕರು | ಸಿ ಗುಂಪು<br>ಡಿ ಗುಂಪು |
| ಮುಂಬಡ್ತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು | ಬಿ ಗುಂಪು<br>ಸಿ ಮತ್ತು ಡಿ ಗುಂಪು |

| | | |
|---|---|---|
| 10 ವರ್ಷ/15 ವರ್ಷ/20 ವರ್ಷ/25 ವರ್ಷ ಮತ್ತು 30 ವರ್ಷಗಳ ಸೇವೆಗೆ ಕಾಲಮಿತಿ ಬಡ್ತಿ/ಹೆಚ್ಚುವರಿ ವೇತನ ಬಡ್ತಿಗಳ ಮಂಜೂರಾತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಬಿ ಗುಂಪು<br>ಸಿ ಗುಂಪು<br>ಡಿ ಗುಂಪು |
| ಸ್ಥಗಿತ ವೇತನ ಬಡ್ತಿಗಳ ಮಂಜೂರಾತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಎ ಗುಂಪು<br>ಬಿ ಗುಂಪು<br>ಸಿ ಮತ್ತು ಡಿ ಗುಂಪು |
| ಪ್ರತಿ ನಿಯೋಜನೆ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು | ಎ ಮತ್ತು ಬಿ ಗುಂಪು<br>ಸಿ ಮತ್ತು ಡಿ ಗುಂಪು |
| ತರಬೇತಿಗಳಿಗೆ ನಿಯೋಜನೆ | ಕೃಷಿ ಆಯುಕ್ತರು<br><br><br>ಕೃಷಿ ನಿರ್ದೇಶಕರು | ಎ ಮತ್ತು ಬಿ ಗುಂಪು<br>(ರಾಜ್ಯದ ಒಳಗೆ/ಹೊರಗೆ)<br>ಬಿ ಗುಂಪು (ವಿದೇಶಗಳಿಗೆ)<br>ಸಿ ಮತ್ತು ಡಿ ಗುಂಪು<br>(ರಾಜ್ಯದ ಒಳಗೆ/ಹೊರಗೆ ಮತ್ತು ವಿದೇಶಕ್ಕೆ) |
| ಆಸ್ತಿ ಖರೀದಿ ಮತ್ತು ಮಾರಾಟ ಮಾಡಲು ಅನುಮತಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಎ ಗುಂಪು<br>ಬಿ ಗುಂಪು<br>ಸಿ ಮತ್ತು ಡಿ ಗುಂಪು |
| ಕಾನೂನು ಘಟಕಕ್ಕೆ ಸಂಬಂಧಿಸಿದ ವಿಷಯಗಳು | ಕೃಷಿ ಆಯುಕ್ತರು<br><br><br>ಕೃಷಿ ನಿರ್ದೇಶಕರು | All Contempt/ KAT cases (All timelimit cases)<br><br>Issue authorisation for KAT cases |
| ಸಾಮಾನ್ಯ ಭವಿಷ್ಯ ನಿಧಿ ಮುಂಗಡಗಳು/ಇತರೆ ಮುಂಗಡಗಳು | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು<br>ಜಂಟಿ/ಅಪರ ನಿರ್ದೇಶಕರು(ಆಡಳಿತ) | ಎ ಮತ್ತು ಬಿ ಗುಂಪು(Partial withdrawal)<br>ಸಿ ಮತ್ತು ಡಿ (Partial withdrawal)<br>ಎ,ಬಿ,ಸಿ ಮತ್ತು ಡಿ ಗುಂಪು<br>(Temporary Advances) |
| ಜೇಷ್ಟತಾ ಪಟ್ಟಿಗಳು | ಕೃಷಿ ಆಯುಕ್ತರು<br><br>ಕೃಷಿ ನಿರ್ದೇಶಕರು | ಎ, ಬಿ ಮತ್ತು ಸಿ ಗುಂಪು<br><br>ಡಿ ಗುಂಪು-ಕೇಂದ್ರ ಕಛೇರಿ ಮತ್ತು ಬೆಂಗಳೂರು ಜಿಲ್ಲೆ |
| ಹೊಸ ವಾಹನಗಳ ಖರೀದಿ ಮತ್ತು ಜಿಲ್ಲೆಗಳಿಗೆ ಟೆಂಡರ್ ಮುಂದುವರಿಕೆಗೆ ಅನುಮೋದನೆ | ಕೃಷಿ ಆಯುಕ್ತರು | |
| ವಾಹನಗಳ ದುರಸ್ಥಿ | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು | Above 50,000/-<br>Up to 50,000/- |

**ತಾಂತ್ರಿಕ ವಿಷಯಗಳು:**

| | | |
|---|---|---|
| **ಎಲ್ಲಾ ಯೋಜನೆಗಳ ಮಾರ್ಗಸೂಚಿಗಳು/ಸುತ್ತೋಲೆಗಳು** | ಕೃಷಿ ಆಯುಕ್ತರು | |
| **ಟೆಂಡರ್ ಅನುಮೋದನೆ** | ಕೃಷಿ ಆಯುಕ್ತರು | As per KTPP Norms |
| **ಯೋಜನೆಗಳ ಅನುಷ್ಠಾನ ಮತ್ತು ಯೋಜನೆಗಳ ಮರು ವಿಂಗಡಣೆ/ಘಟಕ ಪರಿವರ್ತಿತ ಅನುಮೋದನೆ (all deviations of components)** | ಕೃಷಿ ಆಯುಕ್ತರು | |
| **ಅನುದಾನ ಬಿಡುಗಡೆ ಪ್ರಾರಂಭದ ಹಂತ/ ಕ್ರಿಯಾಯೋಜನೆಗಿಂತ ಹೆಚ್ಚುವರಿ ಬಿಡುಗಡೆಗಳಿಗೆ** | ಕೃಷಿ ಆಯುಕ್ತರು | |
| **ಕಟ್ಟಡಗಳ ನಿರ್ಮಾಣಕ್ಕೆ ಅನುಮೋದನೆ** | ಕೃಷಿ ಆಯುಕ್ತರು<br>ಕೃಷಿ ನಿರ್ದೇಶಕರು | above 5 Lakhs<br>below 5 Lakhs |
| **ಇಲಾಖಾ ಯೋಜನೆಗಳ ಪ್ರಗತಿ ಬಗ್ಗೆ ಪತ್ರಿಕೆಗಳಿಗೆ ಮಾಹಿತಿಯನ್ನು ಒದಗಿಸುವುದು** | ಕೃಷಿ ಆಯುಕ್ತರು | |

ತಾಂತ್ರಿಕ ವಿಷಯಗಳಲ್ಲಿ ಕೃಷಿ ನಿರ್ದೇಶಕರಿಂದ ತಾಂತ್ರಿಕ ಅನುಮೋದನೆ ಪಡೆದ ತರುವಾಯ, ಜಿಲ್ಲಾವಾರು ಹಂಚಿಕೆ ಮಾಡುವುದು ಹಾಗೂ ಅದಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಂಬಂಧಪಟ್ಟ ಅಪರ ಕೃಷಿ ನಿರ್ದೇಶಕರ ಅನುಮೋದನೆ ಪಡೆದು ಅನುದಾನವನ್ನು ಬಿಡುಗಡೆ ಮಾಡುವುದು. ಎಲ್ಲಾ ಅಪರ ಕೃಷಿ ನಿರ್ದೇಶಕರುಗಳು ತಮ್ಮ ವಿಭಾಗಕ್ಕೆ ಸಂಬಂಧಿಸಿದಂತೆ ಜಿಲ್ಲಾ ರೈತರಿಂದ ಮಾರ್ಗಸೂಚಿಯನ್ವಯ ಮಾಹಿತಿ ಅಥವಾ ಸ್ಪಷ್ಟೀಕರಣ ತಮ್ಮ ಹಂತದಲ್ಲೇ ನೀಡುವುದು.

ಕೇಂದ್ರ ಸರ್ಕಾರಕ್ಕೆ/ರಾಜ್ಯ ಸರ್ಕಾರಕ್ಕೆ ಮತ್ತು ಇತರೆ ಎಲ್ಲಾ ಮೇಲಾಧಿಕಾರಿಗಳಿಗೆ ಸಲ್ಲಿಸುವ ಪ್ರಸ್ತಾವನೆಗಳಿಗೆ ಮೊದಲಬಾರಿಗೆ ಕಡ್ಡಾಯವಾಗಿ ಕೃಷಿ ಆಯುಕ್ತರ ಅನುಮೋದನೆ ಪಡೆಯುವುದು.

ಮೂಲ ಪ್ರಸ್ತಾವನೆಯಲ್ಲಿ ಬದಲಾವಣೆಗಳಿದ್ದಲ್ಲಿ ಕೃಷಿ ಆಯುಕ್ತರ ಅನುಮೋದನೆ ಪಡೆಯುವುದು ಬದಲಾವಣೆ ಇಲ್ಲದಿದ್ದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಸಂಬಂಧಪಟ್ಟ ಅಪರ/ಜಂಟಿ ನಿರ್ದೇಶಕರು(ಆಡಳಿತ)/ಅಪರ ಕೃಷಿ ನಿರ್ದೇಶಕರ ಅನುಮೋದನೆ ಪಡೆಯುವುದು.

ಮೇಲ್ಕಂಡ ಅಂಶಗಳನ್ನು ದಿನಾಂಕ: 01.11.2014 ರಿಂದ ವಿವಿಧ ಹಂತದ ಅಧಿಕಾರಿಗಳು ಅನುಷ್ಠಾನಗೊಳಿಸಲು ತಿಳಿಸಲಾಗಿದೆ.

ಸಹಿ/-
ಕೃಷಿ ಆಯುಕ್ತರು.

**ಪ್ರತಿಯನ್ನು:**

1. ಮಾನ್ಯ ಕೃಷಿ ಸಚಿವರ ಆಪ್ತಕಾರ್ಯದರ್ಶಿಯವರಿಗೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಮಾನ್ಯ ಕೃಷಿ ಸಚಿವರ ಅವಗಾಹನೆಗೆ ತರಬೇಕೆಂದು ಕೋರಲಾಗಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಎಲ್ಲಾ ಅಪರ ಕೃಷಿ ನಿರ್ದೇಶಕರು/ಜಂಟಿ ಕೃಷಿ ನಿರ್ದೇಶಕರು/ಉಪ ಕೃಷಿ ನಿರ್ದೇಶಕರುಗಳಿಗೆ
4. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಕೇಂದ್ರ ಕಛೇರಿ, ಬೆಂಗಳೂರು
5. ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
6. ಸುತ್ತೋಲೆ ಕಡತಕ್ಕೆ

ಅಪರ ನಿರ್ದೇಶಕರು(ಆಡಳಿತ)

e:\est5 backup 16 07 2013\anj-sup\new circular.docx